<u>**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**</u>

<u>**ಕೊಡಗು, ಮಡಿಕೇರಿ.**</u>

<u>**ಸ್ಪೆಷಲ್ ಕೇಸ್ ನಂ. 54/2019**</u>

**ಪ್ರಾಸಾ ಃ 1**

**ಚಾಸಾ ಃ 1**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ಡಿ.ಸುಜಿತ್** |
| **ತಂದೆಯ ಹೆಸರು** | ಃ | **ಧರ್ಮಣ್ಣ** |
| **ವಯಸ್ಸು** | ಃ | **33 ವರ್ಷ** |
| **ವೃತ್ತಿ** | ಃ | **ಕಂಟ್ರಾಕ್ಟರ್** |
| **ವಾಸ** | ಃ | **ಚೌಡ್ಲು ಗ್ರಾಮ, ಸೋಮವಾರಪೇಟೆ.** |

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 16.09.2021**

<u>**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ**</u>

ಚಾಸಾ-2 ನನ್ನ ಚಿಕ್ಕಪ್ಪನ ಮಗ. ಚಾಸಾ-3 ನನ್ನ ಸ್ನೇಹಿತ. ಚಾಸಾ-4 ಮತ್ತು 5 ಗೊತ್ತು. ಆರೋಪಿ ಗೊತ್ತು. ನಾನು ಬೋವಿ(ವಡ್ಡ) ಜನಾಂಗಕ್ಕೆ ಸೇರಿದ್ದು, ಅದು ಪರಿಶಿಷ್ಟ ಜಾತಿಗೆ ಬರುತ್ತದೆ. ಆರೋಪಿ ಕೊಡವ ಜನಾಂಗಕ್ಕೆ ಸೇರಿರುತ್ತಾರೆ. ನಾನು ಯಾವ ಜಾತಿ ಎಂಬುದು ಆರೋಪಿಗೆ ಗೊತ್ತು.

ದಿನಾಂಕಃ20.10.2019 ರಂದು ನಾನು ಚಿಕನ್ ತೆಗೆದುಕೊಂಡು ಸಂಜೆ 5.30 ಕ್ಕೆ ನನ್ನ ಬುಲೆಟ್ ಬೈಕಿನಲ್ಲಿ ಚಾಸಾ-2 ರವರ ಜೊತೆ ಕಕ್ಕೆ ಹೊಳೆ ಬಳಿ ಬಂದಾಗ ಅಲ್ಲಿ ಚಾಸಾ-3 ರವರು ನಿಂತಿದ್ದರು. ಅದನ್ನು ನೋಡಿ ನಾನು ನನ್ನ ಬೈಕನ್ನು ನಿಲ್ಲಿಸಿ ಚಾಸಾ-3 ರವರ ಹತ್ತಿರ ಹೋಗಿ ಮಾತನಾಡುತ್ತಿದ್ದೆ. ಆ ರೀತಿ ನಾವಿಬ್ಬರು ಮಾತನಾಡುತ್ತಿದ್ದಾಗ

ಆರೋಪಿ ತನ್ನ ಬಾಬ್ತು ಕಾರಿನಲ್ಲಿ ನಮ್ಮನ್ನು ನೋಡಿ ಅಲ್ಲಿಗೆ ಬಂದು, ಕಾರಿನಲ್ಲಿಯೇ ಕುಳಿತು ನನ್ನನ್ನು ಉದ್ದೇಶಿಸಿ ವಡ್ಡ ಸೂಳೆಮಗನೆ ನಿನ್ನ ತಾಯಿನಾ ಕೇಯ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆ ಸಂದರ್ಭದಲ್ಲಿ ಕಾರು ಚಾಲನೆಯಲ್ಲಿಯೇ ಇತ್ತು. ನನಗೆ ಅವಾಚ್ಯ ಶಬ್ದಗಳಿಂದ ಬೈದ ನಂತರ ಅವರು ಅಲ್ಲಿಂದ ಹೊರಟು ಹೋದರು. ನಂತರ ನಾನು ಚಾಸಾ-2 ರವರೊಂದಿಗೆ ಬೈಕಿನಲ್ಲಿ ನಮ್ಮ ಮನೆಗೆ ಹೋಗಿರುತ್ತೇನೆ. ನಂತರ ನನ್ನ ತಂದೆಗೆ ಚಿಕನ್ ಕೊಟ್ಟು ಚಾಸಾ-2 ರವರನ್ನು ಅಲ್ಲಿಯೇ ಇಳಿಸಿ ನನ್ನ ಬೈಕಿನಲ್ಲಿ ಚಾಸಾ-5 ರವರ ಅಂಗಡಿಯ ಬಳಿ ಹೋಗಿರುತ್ತೇನೆ. ಅಲ್ಲಿ ಸುಮಾರು 10 ರಿಂದ 15 ನಿಮಿಷ ಇದ್ದು ನಂತರ ನನ್ನ ಬೈಕಿನಲ್ಲಿಯೇ ಕುಳಿತುಕೊಂಡು ಆರೋಪಿಗೆ ನನ್ನ ಮೊಬೈಲ್ ನಿಂದ ಕರೆ ಮಾಡಿ, ಗಣಪತಿ ಅಣ್ಣ ನೀವು ದಾರಿಯಲ್ಲಿ ಯಾರಿಗೋ ಅವಾಚ್ಯ ಶಬ್ದಗಳಿಂದ ಬೈದಿದ್ದೀರಿ, ನನಗೆ ಬೈದಿಲ್ಲಾ ಎಂದು ತಿಳಿದುಕೊಳ್ಳುತ್ತೇನೆ, ಆದರು ನನಗೆ ಬೈದ ರೀತಿಯಲ್ಲಿ ಇರುತ್ತದೆ, ನೀವು ಯಾರಿಗೆ ಬೈದಿದ್ದೀರಿ ಎಂದು ಕೇಳಿರುತ್ತೇನೆ. ಅದಕ್ಕೆ ಅವರು ನಾನು ನಿನಗೇ ಬೈದಿರುತ್ತೇನೆ ಏನು ಈಗ ಎಂದು ಹೇಳಿದರು. ಆಗ ನಾನು ನೀವು ಎಲ್ಲಿದ್ದೀರಿ ಎಂದು ಕೇಳಿದಾಗ ಅವರು ನೀನು ಎಲ್ಲಿದ್ದೀಯಾ ಅಲ್ಲೇ ಇರು ನಾನು ಅಲ್ಲಿಗೆ ಬರುತ್ತೇನೆ ಎಂದು ಹೇಳಿದರು. ಆಗ ನಾನು ಚಾಸಾ-5 ರವರ ಅಂಗಡಿಯ ಬಳಿ ಇರುತ್ತೇನೆ ಎಂದು ತಿಳಿಸಿರುತ್ತೇನೆ. ನಂತರ ಸುಮಾರು 5 ನಿಮಿಷಗಳ ನಂತರ ಆರೋಪಿ ತಮ್ಮ ಕಾರಿನಲ್ಲಿ ಚಾಸಾ-5 ರವರ ಅಂಗಡಿಯ ಬಳಿ ಬಂದರು. ನಂತರ ತಮ್ಮ ಕಾರನ್ನು ಲೈಟ್ ಕಂಬದ ಬಳಿ ನಿಲ್ಲಿಸಿ ನನ್ನ ಬಳಿ ಬಂದು ಏನೋ ವಡ್ಡ ಸೂಳೇ ಮಕ್ಕಳೇ ನಿಮ್ಮದು ಜಾಸ್ತಿ ಆಗಿದೆ ಎಂದು ಹೇಳಿದರು. ಆಗ ನಾನು ಇಲ್ಲಿ ಮಾತನಾಡುವುದು ಬೇಡ ಅಂಗಡಿಯ ಹಿಂದೆ ಮಾತನಾಡುವ ಎಂದು ಹೇಳಿ ಚಾಸಾ-5 ರವರ ಅಂಗಡಿಯ ಹಿಂದುಗಡೆಗೆ ಕರೆದುಕೊಂಡು ಹೋದೆನು. ಅಲ್ಲಿ ಅವರು ನಿಮ್ಮದು ಬಾರಿ ಆಗಿದೆ ನೀನು ಏನು ದೊಡ್ಡ ಕಲ್ಲು ಬಂಡೆ ಹೋರಾಟಗಾರನಾ, ವಡ್ಡರಿಗೆ ಕಲ್ಲುಬಂಡೆ ತೆಗೆಸಿಕೊಡುವ ತಾಕತ್ತು ನಿನಗೆ ಇದೆಯಾ ಎಂದು ಹೇಳಿದರು. ನಂತರ ನಾವು ಮೇಲೆ ಇರುವವರು ನೀವು ಕೆಳಗೆ ಇರುವವರು, ನಿಮ್ಮದು ಬಹಳ ಆಟ ಆಗಿದೆ ಎಂದು ಹೇಳಿದರು. ಆಗ ನಾನು ಅವರ ಮಾತಿಗೆ ಪ್ರತಿರೋಧ ಮಾಡಿರುತ್ತೇನೆ. ಆಗ ಆರೋಪಿ ನೀನು

ಇಂಜಿನಿಯರ್ ವಿಜಯ ಕುಮಾರ್ ಬಳಿ ನನ್ನ ಬಗ್ಗೆ ಏನು ಹೇಳಿದ್ದೀಯಾ ಎಂದು ಕೇಳಿದರು. ಆಗ ನಾನು ವಿಜಯ ಕುಮಾರ್ ರವರ ಬಳಿ ಏನು ಹೇಳಿಲ್ಲ ಎಂದು ಅವರಿಗೆ ತಿಳಿಸಿ ವಿಜಯ ಕುಮಾರ್ ರವರಿಗೆ ನನ್ನ ಮೊಬೈಲ್‌ನಿಂದ ಕಾಲ್ ಮಾಡಿ ನಾನು ಆರೋಪಿಯ ಬಗ್ಗೆ ಏನಾದರು ಹೇಳಿದ್ದೀನಾ ಎಂದು ಅವರಿಗೆ ಕೇಳಿದೆ, ಆಗ ನನ್ನ ಮೊಬೈಲ್ ಸ್ಪೀಕರನ್ನು ಆನ್ ಮಾಡಿದ್ದೆ. ವಿಜಯ ಕುಮಾರ್ ರವರು ಆರೋಪಿಯ ಬಗ್ಗೆ ನಾನು ಏನು ಹೇಳಿಲ್ಲ ಎಂದು ತಿಳಿಸಿದರು. ಆಗ ಆರೋಪಿ ವಿಜಯ ಕುಮಾರ್ ಏನು ದೊಡ್ಡ ಷಾಟಾನಾ ಎಂದು ಹೇಳಿದರು. ಆಗ ನಾನು ಆ ರೀತಿ ಮಾತನಾಡಬೇಡಿ ಎಂದು ಆರೋಪಿಗೆ ಹೇಳಿದೆ. ಆಗ ಆರೋಪಿ ನಿನ್ನನ್ನು ತೆಗೆಯುತ್ತೇನೆ ಎಂದು ಹೇಳಿ ತನ್ನ ಕಾರಿನಿಂದ ಡಬಲ್ ಬ್ಯಾರಲ್ ಗನ್ನನ್ನು ತೆಗೆದುಕೊಂಡು ಬಂದು ನಿನ್ನನ್ನು ತೆಗೆಯುತ್ತೇನೆ ಎಂದು ಹೇಳಿ ಗನ್ನಿನಿಂದ ನನ್ನ ಎದೆಯ ಎಡಭಾಗಕ್ಕೆ ಗುಂಡು ಹಾರಿಸಿದರು. ಆ ರೀತಿ ಗುಂಡು ಹಾರಿಸಿದ್ದರಿಂದ ನನ್ನ ಎದೆಯ ಎಡಭಾಗದಲ್ಲಿ ಗಾಯ ಆಗಿ ರಕ್ತದ ಗಾಯ ಆಗಿರುತ್ತದೆ. ನಂತರ ನಾನು ಕೆಳಕ್ಕೆ ಬಿದ್ದಿರುತ್ತೇನೆ. ನಾನು ಕೆಳಕ್ಕೆ ಬಿದ್ದ ನಂತರ ಆರೋಪಿ ಗನ್ನನ್ನು ತೆಗೆದುಕೊಂಡು ಸ್ಥಳದಿಂದ ಓಡಿ ಹೋದರು.

ನಂತರ ಸ್ಥಳದಲ್ಲಿಯೇ ಇದ್ದ ಚಾಸಾ-2 ಮತ್ತು 4 ರವರು ನನ್ನನ್ನು ಆಟೋದಲ್ಲಿ ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸೋಮವಾರಪೇಟೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಅಲ್ಲಿಗೆ ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ಹೇಳಿಕೆ ನಾನು ನೀಡಿದ ಹೇಳಿಕೆ ಇದ್ದು, ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಡಿಕೇರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ನನಗೆ ಶಸ್ತ್ರ ಚಿಕಿತ್ಸೆ ಮಾಡಿ ನನ್ನ ದೇಹದಿಂದ 6 ಗುಂಡುಗಳನ್ನು ತೆಗೆದಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಒಂದು ಸೀಲ್ ಮಾಡಿದ ಗನ್ ಮತ್ತು ಸೀಲ್ ಮಾಡಿದ ಬಟ್ಟೆಗಳನ್ನು ತೆರೆಯಲು ಅನುಮತಿ ಕೇಳಿದ್ದು, ಅನುಮತಿ ನೀಡಲಾಯಿತು.**

ಈಗ ನಾನು ನೋಡುತ್ತಿರುವ ಕೋವಿ ಆ ದಿನ ಆರೋಪಿ ನನ್ನ ಮೇಲೆ ಗುಂಡು ಹಾರಿಸಿದ ಕೋವಿ ಇರುತ್ತದೆ. ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸಂದರ್ಭದಲ್ಲಿ ನಾನು ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಒಂದು ಟೀ ಶರ್ಟ್, ಲೆದರ್ ಜರ್ಕಿನ್ ಮತ್ತು ಪ್ಯಾಂಟ್ ಆ ದಿನ ಕೃತ್ಯ ನಡೆದ ಸಂದರ್ಭದಲ್ಲಿ ಧರಿಸಿದ್ದ ಬಟ್ಟೆಗಳಿರುತ್ತವೆ. ಅವುಗಳನ್ನು ಕ್ರಮವಾಗಿ ಮು.ಮಾ. 2 ರಿಂದ 4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.